(*b*) One.

(*c*) Yes.

(*d*) The loan is not yet sanctioned and this will arise only after the loan is sanctioned to the applicant.

ಶ್ರೀ ಎಸ್. ಕರಿಯಪ್ಪ.—ಈಗ ಇದಕ್ಕೆ ಸಂಬಂಧಪಟ್ಟ ರೆಕಾರ್ಡ್ ಯಾವ ಹಂತದಲ್ಲಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಇನ್ನೂ ನಮ್ಮವರೆಗೆ ಬಂದಿಲ್ಲ.

ಶ್ರೀ ಎಸ್. ಕರಿಯಪ್ಪ.—ಈಗ ಸಾಲ ಕೇಳಿರತಕ್ಕವರು ಈಗಾಗಲೇ 2-3 ಸೊಸೈಟಿಗಳಲ್ಲಿ ಸಾಲ ತೆಗೆದುಕೊಂಡು ಡಿಫಾಲ್ಟರಾಗಿದ್ದಾರೆಂಬ ವಿಷಯ ಸರ್ಕಾರದವರಿಗೆ ಗೊತ್ತಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಸಾಲಕ್ಕೆ ಕೊಡತಕ್ಕ ಅಂದರೆ ಅಡಮಾನ ಮಾಡತಕ್ಕ ಜಮೀನಿನ ಮೇಲೆ ಯಾವ ಎನ್‌ಕಂಬ್ರೆನ್ಸೂ ಇಲ್ಲವಿದ್ದರೆ ಸಾಲ ಕೊಡಬಹುದು. ಅವರು ಬೇರೆ ಕಡೆ ಸಾಲಮಾಡಿರತಕ್ಕ ವಿಷಯ ನಮಗೆ ಸಂಬಂಧಪಟ್ಟಿದ್ದಲ್ಲ.

ಶ್ರೀ ಎಸ್. ಕರಿಯಪ್ಪ.—ಲ್ಯಾಂಡ್‌ಮಾರ್ಟ್‌ಗೇಜ್ ಬ್ಯಾಂಕಿನವರು ಸಾಲಕೊಡತಕ್ಕ ಕಡೆ ನೀವೇಕೆ ಸಾಲಕೊಡಬೇಕು ?

ಶ್ರೀ ಎಂ. ವಿ. ಕೃಷ್ಣಪ್ಪ.—ತಕಾವಿ ಮತ್ತು ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನುಗಳನ್ನು ಪೂರ್ವಕಾಲದಿಂದಲೂ ಸರ್ಕಾರವೇ ಕೊಡುತ್ತಾ ಬಂದಿದೆ. ಅದನ್ನೇ ಈಗಲೂ ಮುಂದುವರಿಸಲಾಗಿದೆ.

ಅಧ್ಯಕ್ಷರು.—ಒಬ್ಬ ವ್ಯಕ್ತಿಯ ಬಗ್ಗೆ ಎಷ್ಟು ಉಪಪ್ರಶ್ನೆಗಳನ್ನು ಹಾಕುವುದು ? ಇದು ಸಾರ್ವ ಜನಿಕ ಪ್ರಾಮುಖ್ಯತೆಯುಳ್ಳ ಪ್ರಶ್ನೆಯಲ್ಲ.

ಶ್ರೀ ಎಸ್. ಕರಿಯಪ್ಪ.—ಈಗಾಗಲೇ ಸಾಲ ಕೇಳಿರತಕ್ಕ ವ್ಯಕ್ತಿ 2-3 ಸೊಸೈಟಿಗಳಲ್ಲಿ ಸಾಲ ಮಾಡಿ ಡಿಫಾಲ್ಟರಾಗಿದ್ದಾನೆಂದು ಅಸಿಸ್ಟೆಂಟ್ ಕಮಿಷನರು ಶಿಫಾರ್ಸು ಮಾಡಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆತನಿಗೆ ಕ್ರೆಡಿಟ್‌ವರ್ದಿನೆಸ್ ಇದೆಯೇ ಇಲ್ಲವೇ ಎಂಬುದನ್ನು ನೋಡಿ ಕೊಂಡು ಸಾಲ ಕೊಡಲಾಗುತ್ತದೆ. ಆತ ಸಾಲಕ್ಕೆ ಆಧಾರಮಾಡತಕ್ಕ ಜಮೀನು ಬೇರೆ ಯಾರಿಗೂ ಎನ್‌ಕಂಬ್ರನ್ಸ್ ಆಗಿರಬಾರದು. ಇಷ್ಟಿದ್ದರೆ ಸಾಕು.

Extent of Land required to be acquired for Mangalore-Panambur-Harbour-Railway-Project.

*Q.—634. Sri B. BHASKAR SHETTY (Kaup) [on behalf of SRI SANJEEVANATH AIKALA (Surathkal)].—

Will the Government be pleased to state :—

(*a*) the total land area required to be acquired for Mangalore-Panambur-Harbour Railway Project ;

(*b*) the nature of the land (*i.e.*, Nanja (Wet), Punja (Dry), Bagaitu (Garden) and their extent) (separate figures to be given) ;

(*c*) the total number of houses and their estimated cost required to be acquired ;

(*d*) the extent of land voluntarily surrended up to 30th April 1964 ;

(*e*) the amount required to be paid as compensation for the lands and buildings to be acquired ;

(*f*) the facilities provided for those who are displaced by the formation of this Harbour Railway Lines ?

A.—**G. B. SHANKAR RAO** (Parliamentary Secretary to the Minister for Public Works).—

(*a*) About 580 acres.

(*b*)

1. Nanja (wet)	302·40	acres.
2. Punja (dry)	125·61	,,
3. Bagaitu (garden)	40·76	,,
Total ...	468.77	,,

The balance area to be acquired in Panambur and Baikampady villages are not yet surveyed and their particulars are, therefore, not available.

(*c*) 142 houses valued at Rs. 3,28,800 in the surveyed area of the 13 villages and about 20 houses in the unsurveyed area of the two villages.

(*d*) About 180 acres.

(*e*) About Rs. 53 lakhs.

(*f*) Except in cases where the land including the building is required early, the Railway authorities intend to take possession of the buildings after the award is passed and compensation is paid to the parties.

Families completely displaced (rendered houseless and landless) are proposed to be given free house sites mostly in Iddya and Kuthethur. The sites would be about 12½ cents and the rehabilitation colonies would have common amenities like roads, schools, wells, etc.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ರೈಲ್ವೆ ಸಂಬಂಧದಲ್ಲಿ ಇಲ್ಲಿಯವರೆಗೆ ಸ್ವಾಧೀನಪಡಿಸಿಕೊಂಡಿರತಕ್ಕ ಜಮೀನು ಮತ್ತು ಮನೆಗಳೆಷ್ಟು? ಹಾಗೂ ಸ್ಥಾನಪಲ್ಲಟರಾಗಿರತಕ್ಕ ಕುಟುಂಬಗಳೆಷ್ಟು?

ಶ್ರೀ ಜಿ. ಬಿ. ಶಂಕರರಾವ್.—ಸ್ಥಾನಪಲ್ಲಟವಾಗಿರತಕ್ಕ ಕುಟುಂಬಗಳು 80 ಮತ್ತು ಸ್ವಾಧೀನ ಮಾಡಿಕೊಂಡಿರುವುದು 180.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈಗ ಅಕ್ವೈರ್ ಮಾಡಿಕೊಂಡಿರತಕ್ಕ—ನಂಜಾ, ಪುಂಜಾ ಮತ್ತು ಗಾರ್ಡೆನ್ ಲ್ಯಾಂಡುಗಳಿಗೆ ಪರಿಹಾರವೇನನ್ನು ಕೊಡಲಾಗಿದೆ, ಎಕರೆ ಒಂದಕ್ಕೆ ಏನು ಕ್ರಯ ಕೊಡಲಾಗಿದೆ?

ಶ್ರೀ ಜಿ. ಬಿ. ಶಂಕರರಾವ್.—ಈಗ ಆ ಡೀಟೇಲ್ಸ್ ನನ್ನಲ್ಲಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸ್ಥಾನಪಲ್ಲಟವಾದವರ ಬಗ್ಗೆ ಅನುಕೂಲಪಡಿಸಲು ಏನು ಕಾರ್ಯ ಕ್ರಮ ಕೈಗೊಂಡಿದ್ದೀರಾ?

Mr. SPEAKER.—I think that the P.W. Minister is giving a detailed information regarding the facilities given.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸ್ಥಾನಪಲ್ಲಟರಾಗಿರತಕ್ಕ ಕುಟುಂಬ ವರ್ಗದವರಿಗೆ ನಿವೇಶನಗಳನ್ನು ಉಚಿತವಾಗಿ ಕೊಡುವುದರ ಜೊತೆಗೆ ಇತರ ಯಾವ್ಯಾವ ಸೌಲಭ್ಯಗಳನ್ನು ಕೊಟ್ಟಿದ್ದೀರಾ?

Sri G. B. SHANKAR RAO.—For these families, who are to be displaced, house sites will be provided in Iddya and Kuthethur villages.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈಗ ಸ್ಥಾನಪಲ್ಲಟರಾಗಿರುವವರು ಬಡವರ್ಗದ ಕುಟುಂಬದವರು. ಅವರು ನಿತ್ಯ ಜೀವನ ನಡೆಸುವುದಕ್ಕೆ ಬಹಳವಾಗಿ ತೊಂದರೆಪಡುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಅವರಿಗೆ ಸರ್ಕಾರದವರು ತಾತ್ಕಾಲಿಕ ಪರಿಹಾರವನ್ನೇನಾದರೂ ಕೊಡುತ್ತಿದ್ದಾರೆಯೇ?

Sri G. B. SHANKAR RAO.—So far, no such families have been displaced, which require immediate relief.

ಶ್ರೀ ಗೋಪಾಲ ಸಾಲೆನ್ನ.—ಈಗ ಸ್ಥಾನಪಲ್ಲಟರಾಗಿರುವವರು ಕಡುಬಡವರಾಗಿರುವುದರಿಂದ ಅವರಿಗೆ ಅಲ್ಲಿ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಸರ್ಕಾರದವರು ಏನಾದರೂ ಸಹಾಯ ಮಾಡುತ್ತಾರೆಯೇ ?

Sri G. B. SHANKAR RAO.—For the families who lose their houses, house sites of 12½ cents will be provided free of cost.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಸ್ಥಾನಪಲ್ಲಟರಾಗಿರುವವರು ಈಗ ಕೊಟ್ಟಿರತಕ್ಕ ನಿವೇಶನಗಳನ್ನು ಪೂರೈಸಿದ್ದಾರೆಯೇ ? ಕೆಲವರು ಇದುವರೆಗೂ ಅಲ್ಲಿಗೆ ಹೋಗದೆ ಇರಲು ಕಾರಣವೇನು ?

Mr. SPEAKER.—It is purely a hypothetical question.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಈ ಕ್ಷೇತ್ರದ ಶಾಸನ ಸಭೆಯ ಸದಸ್ಯರಾದ ಶ್ರೀಮಾನ್ ಸಂಜೀವನಾಥ್ ಐಕಳ ಅವರನ್ನು ಕೆಲವರು ಕರೆದುಕೊಂಡು ಹೋಗಿ ಈ ವಿಚಾರವನ್ನು ಈ ಸಭೆಯ ಗಮನಕ್ಕೆ ತರಬೇಕೆಂದು ಹೇಳಿದ್ದರಿಂದ ಈ ಪ್ರಶ್ನೆ ಇಲ್ಲಿ ಬಂದಿದೆ. ಅಂದಮೇಲೆ ಇತ್ತೀಚೆಗೆ ಏನು ಸೌಕರ್ಯಗಳನ್ನು ಸ್ಥಾನಪಲ್ಲಟರಾದವರಿಗೆ ಕೊಟ್ಟಿದ್ದೀರಿ ?

ಶ್ರೀ ಜಿ. ಬಿ. ಶಂಕರರಾವ್.—ಯಾರ್ಯಾರು ಮನೆ ಕಟ್ಟಿಕೊಳ್ಳುತ್ತಾರೋ ಅಂತಹವರಿಗೆ 12½ ಸೆಂಟುಗಳಷ್ಟು ಜಮೀನನ್ನು ಪುಕ್ಕಟೆಯಾಗಿ ಕೊಡುತ್ತೇವೆ. ಒಂದು ವೇಳೆ ಆ ಜನಗಳು ಅಲ್ಲಯೇ ಸೆಟಲ್ ಆದರೆ ಅವರಿಗೆ ಬೇಕಾದ್ದಷ್ಟು ಸೌಕರ್ಯಗಳನ್ನು ಕೊಡುವುದಕ್ಕೆ ಸರ್ಕಾರ ಸಿದ್ಧವಿದೆ.

Mr. SPEAKER.—In addition to the compensation that has been given to them on account of acquisition and eviction, sites have been given to them and building material such as bamboos etc. will be given and free transportation of materials is also arranged for. This has already been said on the floor of the House. If Sri Bhaskar Shetty so desire, I shall hold it over. Let Sri Sanjeevanath come.

Sri B. BHASKARA SHETTY.—Yes, Sir.

Mr. SPEAKER.—I will hold it over.

Amount spent for the Improvement of Kumta—Siddapur Road *via* Doddamane.

*Q.—681. Smt. VASANTALATA V. MIRJANKAR (Kumta).—

Will the Government be pleased to state :—

(*a*) the total estimated cost for the improvement of Kumta-Siddapur road *via* Doddamane ;

(*b*) the amount spent so far, for the improvement of the said road ;

(*c*) the total number of bridges constructed so far, and the number of bridges yet to be constructed on this road ?

A.—Sri G. B. SHANKAR RAO (Parliamentary Secretary to the Minister for Public Works).—

(*a*) Rs. 54,25,300.

(*b*) Rs. 17,87,000 to end of April 1964.

(*c*) No bridge has been constructed. Eleven bridges have to be constructed.